ಮಾಡಲಾಗುತ್ತದೆ. ನೀವು ಹೇಳಿರುವ ಸಮಯಕ್ಕೆ ಸರಿಯಾಗಿ ಬಂದು ಬಿಡಿ. ನೀವು ಎರಡು ದಿನಗಳ ಮೊದಲೇ ಬರಬೇಕಿದೆ. ರಿಹರ್ಸಲ್ ಇರುತ್ತದೆ. ನನ್ನ ಈ ನಂಬರ್ ನೀವು ಸೇವ್ ಮಾಡಿಕೊಳ್ಳಿ. ಯಾವುದೇ ಸಂದರ್ಭದಲ್ಲಿ ಏನೇ ಅಡಚಣೆಯಾದರೂ ನೀವು ನಿಸ್ಸಂಕೋಚವಾಗಿ ನನಗೆ ಫೋನ್ ಮಾಡಬಹುದು. ನಿಮಗೆ ಮತ್ತೊಮ್ಮೆ ಅಭಿನಂದನೆಗಳು' ಎಂದರು.

ಸೆಕ್ರೆಟರಿ ಅವರ ಅಷ್ಟು ಮಾತುಗಳನ್ನು ಕೇಳಿ ಒಂದು ಕ್ಷಣ ಭಾವೇಶ್ ಮೂಕರಾಗಿ ನಿಂತು ಬಿಟ್ಟಿದ್ದರು. ನೀತಾ ಹತ್ತಿರ ಬಂದು ಅವರ ಭುಜದ ಮೇಲೆ ಕೈಯಿಟ್ಟಾಗಲೇ ಎಚ್ಚರ. ಆಕೆ ಕಡು ಕುತೂಹಲದಿಂದ ವಿಷಯವೇನೆಂದು ತಿಳಿಯಲು ಆತುರರಾಗಿದ್ದರು. ಕೆಲವು ಕ್ಷಣಗಳೇ ಹಿಡಿಸಿತು ಭಾವೇಶ್ ಅವರಿಗೆ ವಾಸ್ತವಕ್ಕೆ ಬರಲು. ಈಗಷ್ಟೆ ಪೊಲೀಸ್ ಠಾಣೆಯ ಓಡಾಟ ಜಂಜಾಟದಲ್ಲಿ ಸಿಕ್ಕಿಬಿದ್ದು, ಒಂದು ಒಳ್ಳೆಯ ಕೆಲಸಕ್ಕೆ ವಿಘ್ನವಾಗಿ ಕಾಲು ಎಳೆಯುವವರು ಎಷ್ಟು ಜನ ಎಂದು ಮನಸ್ಸಿಗೆ ಬೇಸರವಾದ ಹೊತ್ತೇ, ನಿಮ್ಮ ಒಳ್ಳೆಯ ಕೆಲಸವನ್ನು ಗುರುತಿಸುವವರೂ ಇದ್ದಾರೆ ಎಂದು ಮತ್ತೆ ಅವರಿಗೆ ನಂಬಿಕೆ ನೀಡುವಂತೆ, ತಮ್ಮ ಕಾರ್ಯದಲ್ಲಿ ಮುನ್ನುಗ್ಗುವಂತೆ ಪ್ರೇರಣೆ ನೀಡಲೆಂದೇ ಬದುಕು ಅವರಿಗೆ ಈ ಪುರಸ್ಕಾರವನ್ನು ಈ ಹೊತ್ತಿನಲ್ಲಿ ಅವರ ಮಡಿಲಿಗೆ ಹಾಕಿದಂತಿತ್ತು. ಇಸವಿ 2014ರ ಸರ್ವಶ್ರೇಷ್ಠ ಅಂಧ ಸ್ವಯಂ ಉದ್ಯೋಗಿಯಾಗಿ ಭಾವೇಶ್ ಗುರುತಿಸಲ್ಪಟ್ಟಿದ್ದರು.

ಅರೆಕ್ಷಣ, ಸಂತಸದಿಂದ ನೀತಾ ಅವರನ್ನು ಅಪ್ಪಿ ಕುಣಿಯಲು ಅವರ ಮನಸ್ಸು ಬಯಸಿತ್ತು. ಆದರೆ ಅವರು ನಡು ಬೀದಿಯಲ್ಲಿ ನಿಂತಿದ್ದರು. ನೀತಾ ಅವರ ಕೈಗಳನ್ನು ಹಿಡಿದು ಸಂಕ್ಷಿಪ್ತವಾಗಿ ದಿಲ್ಲಿಯ ಫೋನಿನ ಸಂತಸದ ಸಂಗತಿಯನ್ನು ಹೇಳಿದರು. ಈ ಕ್ಷಣ ಕಷ್ಟಗಳ ಕಾರ್ಮೋಡ ಕರಗಿದಂತೆ ಮನಸ್ಸು ಹಗುರವಾಗಿತ್ತು. ಖುಷಿಯಿಂದ ರೆಕ್ಕೆ ಬಿಚ್ಚಿ ಹಾರಿತ್ತು. ನೀತಾಗೆ ಹೇಳಿದರು, 'ನಡೆ, ಎಲ್ಲಕ್ಕಿಂತ ಮೊದಲು ನಮ್ಮ ಅಂಧ ಮಿತ್ರರಿಗೆ ಈ ಸುದ್ದಿ ಹೇಳಬೇಕು. ಅವರೆಲ್ಲರನ್ನೂ ಕರೆದುಕೊಂಡು ಪನೋರಮಾ ರೆಸ್ಟೋರೆಂಟ್‌ಗೆ ಹೋಗೋಣ. ಅರೆ ಇದು ಪಾರ್ಟಿ ಕೊಡಬೇಕಾದ ಸಿಹಿ ಸುದ್ದಿ' ಎಂದರು.

ಇದರ ನಡುವೆಯೇ ಸಮಯ ತೆಗೆದುಕೊಂಡು, ಆ ಎಲ್ಲ ಬೀದಿಯ ವ್ಯಾಪಾರಿಗಳನ್ನು ಹೋಗಿ ಭೇಟಿಯಾದರು. ಅವರುಗಳು ವರ್ಷಗಳ ಹಿಂದೆ, ಇವರ ಕೈಗಾಡಿಯನ್ನು ಚರಂಡಿಯಲ್ಲಿ ಎಸೆದಿದ್ದರು. ಭಿಕ್ಷೆ ಬೇಡಬಾರದೇ? ಎಂದವರು. ಅವರಲ್ಲಿ ಅನೇಕರು ಮಾರ್ಕೆಟ್‌ನಲ್ಲಿ ಸ್ಟಾಲ್ ಹಾಕುವುದನ್ನು ಈಗ ನಿಲ್ಲಿಸಿಯೂ ಬಿಟ್ಟಿದ್ದರು. ಆದರೆ ನೀತಾ ಅವರ ಸಹಾಯದಿಂದ ಅವರನ್ನು ಹುಡುಕುತ್ತಾ ಹೋಗಿ ಅವರ ಮನೆಗಳನ್ನು ತಲುಪಿದರು. ಜೊತೆಯಲ್ಲಿ ಮಿಠಾಯಿಯ ಡಬ್ಬಿಗಳನ್ನು ಕೊಂಡೊಯ್ದಿದ್ದರು. ಅವರಿಗೆ ಅವನ್ನು ಉಡುಗೊರೆಯಾಗಿ ಕೊಟ್ಟು ಅವರನ್ನು ಅಪ್ಪಿಕೊಂಡರು. ತಮ್ಮ ಮನದ ಮೂಲೆಯಲ್ಲಿ ಎಲ್ಲಾದರೂ ಇನ್ನೂ ಅವರ ಬಗ್ಗೆ ಸಿಟ್ಟು ಸೆಡವು ಕಹಿ ಉಳಿದಿದ್ದರೆ, ಆ ಎಲ್ಲ ಕೊಳೆಯನ್ನು ತೊಳೆದು ನಿಚ್ಚಳವಾಗಿ ಈ ಕ್ಷಣ ಅವರನ್ನು ಸ್ನೇಹದಿಂದ ಅಪ್ಪ ಬಯಸಿದ್ದರು. ಅವರುಗಳು ಒಡ್ಡಿದ ಆ ಎಲ್ಲ ಸವಾಲುಗಳು ತಮ್ಮನ್ನು ಗಟ್ಟಿ ಮಾಡಿದ್ದವು, ತಮ್ಮ ಧ್ಯೇಯದತ್ತಲ ಹೆಜ್ಜೆಯನ್ನು ದೃಢವಾಗಿಸಿದ್ದವು ಎಂದು ಅವರಿಗೆ ತಿಳಿದಿತ್ತು. ಹಾದಿಯ ಅಡೆತಡೆಗಳಿಗೆ ಕುಸಿದು ಕುಳಿತವನು ತನ್ನ ಗುರಿಯನ್ನು ತಲುಪಲಾರ. ಬಹುಶಃ ಅಡೆತಡೆಗಳೇ ಇಲ್ಲದಿದ್ದರೆ, ನಂತರದ ಇಷ್ಟೆಲ್ಲ ಜನರ ಸ್ನೇಹವನ್ನು, ಸಹಾಯವನ್ನು ತಾನು ಕೃತಜ್ಞತೆಯಿಂದ ನಮಿಸಿ ನೆನೆಯುವ ನಮ್ರತೆ ತನ್ನಲ್ಲಿ ಮೂಡುತ್ತಿರಲಿಲ್ಲ. ಈ ಬೀದಿ ವ್ಯಾಪಾರಿಗಳು ತನ್ನ ಬೆಳವಣಿಗೆಯ ಭಾಗವಾಗಿದ್ದರು ಎಂದು ಭಾವೇಶ್ ಅವರಿಗೆ ಅನಿಸಿತ್ತು. ಅವರೆಲ್ಲರ ಕೈಕುಲುಕಿ 'ನಿಮ್ಮೆಲ್ಲರ ಸ್ನೇಹದ ಕಾರಣದಿಂದಲೇ ಇಂದು ನಾನು ರಾಷ್ಟ್ರಪತಿ ಪುರಸ್ಕಾರ ಪಡೆಯುವ ಹಂತಕ್ಕೆ ತಲುಪಿದೆ. ನಿಮಗೆ ಹೃದಯಪೂರ್ವಕವಾಗಿ ಧನ್ಯವಾದ ಹೇಳಲು ಬಂದೆ' ಎಂದರು.

ಭಾವೇಶ್ ಅವರ ನಮ್ರತೆಯೇ ಅವರೆಲ್ಲರಿಗೆ ಸಂತಸ ನೀಡಿತ್ತು. ಖುಷಿಯಿಂದ ಅಭಿನಂದಿಸಿದರು. ಭಾವೇಶ್ ಆ ಬೀದಿವ್ಯಾಪಾರಿಗಳ ಮನಸ್ಸಿನಲ್ಲಿ ಉಳಿದಿರಬಹುದಾದ ಅಂಧರ ಕುರಿತ ಪೂರ್ವಗ್ರಹವನ್ನೂ ಈ ಮೂಲಕ ಕಳೆದಿದ್ದರು. ಬಹುಶಃ ಅವರುಗಳು ಇನ್ನೆಂದೂ ಅಂಧನೊಬ್ಬನನ್ನು ನೋಡಿದಾಗ ಭಿಕ್ಷೆ ಬೇಡಬಾರದೇ? ಎನ್ನಲಾರರು, ಆತನಿಗೆ ತೊಂದರೆ ಕೊಡಲಾರರು.

ಮಹಾಬಲೇಶ್ವರದಲ್ಲಿ ಪತ್ರಕಾರ ಮಿತ್ರರಾದ ಸಂಜಯ್ ದಸ್ತೂರೆ, ಈ ರಾಷ್ಟ್ರೀಯ ಪುರಸ್ಕಾರ ಬಂದ ಸಮಾಚಾರವನ್ನು ತಮ್ಮ ಉಳಿದ ಮಿತ್ರರಿಗೆ ತಿಳಿಸುತ್ತಾ, ಪೂರಾ ರಾಜ್ಯದಲ್ಲಿ ಈ ಸುದ್ದಿ ಹರಡುವಂತೆ ಪ್ರಯತ್ನಿಸಿದರು. ಅಷ್ಟೇ ಅಲ್ಲ, ಅವರು ಸ್ವತಃ ಒಂದು ದೊಡ್ಡ ಲೇಖನವನ್ನು ಭಾವೇಶ್ ಅವರ ಸಂಘರ್ಷಪೂರ್ಣ ಜೀವನದ ಬಗ್ಗೆ ಬರೆದರು. ಆ ಲೇಖನದಿಂದ ಬಹಳಷ್ಟು ಅಂಧರಿಗೆ ಪ್ರೇರಣೆ ಸಿಕ್ಕಿತು. ಅಂಧರು ಏರಬಲ್ಲ ಎತ್ತರಕ್ಕೆ ಮಿತಿ ಇಲ್ಲ. ತಮ್ಮ ದೃಷ್ಟಿಹೀನತೆ ಹಾದಿಯ ಅಡ್ಡಿಯಲ್ಲ. ಓರ್ವ ತಳ್ಳುಗಾಡಿಯಲ್ಲಿ ಬೀದಿ ಬದಿಯಲ್ಲಿ ಮೋಂಬತ್ತಿ ಮಾರುವ ಅಂಧ ವ್ಯಕ್ತಿಯೂ ರಾಷ್ಟ್ರಪತಿಯವರ ಕೈಯಿಂದ ಪುರಸ್ಕಾರ ಪಡೆಯುವಷ್ಟು ಎತ್ತರಕ್ಕೆ ಏರಬಲ್ಲ ಎಂಬ ಸಂದೇಶವನ್ನು ಹೊತ್ತ ಲೇಖನ, ಕುರುಡರ ಕತ್ತಲೆಯ ಬದುಕಿನಲ್ಲಿ ಹೊಂಗಿರಣಗಳ ಮೂಡಿಸಿತ್ತು.

ಮಹಾಬಲೇಶ್ವರದಲ್ಲಿ ತಮ್ಮ ಹಾಸ್ಟೆಲ್ ಕೆಲಸವನ್ನು ಮಧ್ಯೆ ಬಿಟ್ಟು, ದಿಲ್ಲಿಗೆ ಹೊರಟರು. ದಿಲ್ಲಿಗೆ ಹೋಗಿ ಬರಲು ಸಚಿವಾಲಯದ ಕಡೆಯಿಂದಲೆ, ಭಾವೇಶ್, ನೀತಾ ಮತ್ತು ಕುಣಾಲ್‌ಗೆ ವಿಮಾನದ ಟಿಕೆಟ್ ಕಳುಹಿಸಲಾಯಿತು. ಈ ಎಲ್ಲ ಸಮಾರಂಭ ಬಹಳಷ್ಟು ಗಣ್ಯರ ಉಪಸ್ಥಿತಿಯಲ್ಲಿ ನಡೆಯಲಿತ್ತು. ದಿನಾಂಕ 2 ಡಿಸೆಂಬರ್ 2014, ದಿಲ್ಲಿಯ ವಿಜ್ಞಾನ ಭವನದಲ್ಲಿ ಅನೇಕ ಬಾರಿ ಸಮಾರೋಹದ ರಿಹರ್ಸಲ್ ಮಾಡಿಸಿದರು. 3 ಡಿಸೆಂಬರ್ 'ವಿಶ್ವ ಅಂಗವಿಕಲರ ದಿವಸ'ದಂದು ಸಂಜೆ ಆಗುವುದನ್ನು ಕಾಯುತ್ತಾ ಕುಳಿತರು. ಕೊನೆಗೆ ಅವರು ಉತ್ಸುಕತೆಯಿಂದ ಕಾದ ಆ ಕ್ಷಣ ಬಂದೇ ಬಿಟ್ಟಿತು. ವಿಜ್ಞಾನ ಭವನದಲ್ಲಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರ ಹಸ್ತದಿಂದ ಅಂಧ ಕ್ಷೇತ್ರದ ಸರ್ವೋಚ್ಚ ರಾಷ್ಟ್ರೀಯ ಪುರಸ್ಕಾರವನ್ನು ರಾಷ್ಟ್ರಪತಿಗಳು ಭಾವೇಶ್ ಅವರಿಗೆ ಚಿನ್ನದ ಪದಕವನ್ನು ತೊಡಿಸಿ ನೀಡಿದರು. ಭಾವೇಶ್ ಅವರ ಕೂದಲು ಇನ್ನೂ ಕತ್ತರಿಸಿರಲಿಲ್ಲ. ಈ ಬಾರಿ ನೀತಾ ಅವರ ಇಳಿಬಿದ್ದ ಉದ್ದನೆಯ ಕೂದಲನ್ನು ಕಟ್ಟಿ ಹಿಡಿಯಲು ಸ್ವತಃ ಒಂದು ಸುಂದರವಾದ ಹೇರ್ ಬ್ಯಾಂಡ್ ಕೊಟ್ಟಿದ್ದರು! ಆ ಪೋನಿ ಟೇಲ್‌ನ ಜೊತೆಯಲ್ಲಿ ವೇದಿಕೆ ಮೇಲಕ್ಕೆ ಪುರಸ್ಕಾರ ಪಡೆಯಲು ತಲುಪಿದ್ದರು. ರಾಷ್ಟ್ರಪತಿಗಳು ಇವರ ಕೂದಲಿನ ಶೈಲಿಯನ್ನು ಕುತೂಹಲದಿಂದ ನೋಡಿ, ಮೆಚ್ಚುಗೆ ವ್ಯಕ್ತಪಡಿಸಿದರು! ರಾಷ್ಟ್ರಪತಿಗಳ ಕೈ ಕುಲುಕಿ, ವಿಜ್ಞಾನ ಭವನದ ವೇದಿಕೆಯಲ್ಲಿ ಮೋಂಬತ್ತಿ ಉದ್ಯಮಕ್ಕೆ ಕೊಡುತ್ತಿದ್ದ ಮೊಟ್ಟ ಮೊದಲ ರಾಷ್ಟ್ರೀಯ ಪುರಸ್ಕಾರವನ್ನು ಭಾವೇಶ್ ಸ್ವೀಕರಿಸಿದರು. ಪುರಸ್ಕಾರ ಕೊಡುತ್ತಿದ್ದ ಈ ಸಮಯದಲ್ಲಿ ಭಾವೇಶ್ ಅವರ ಕೆಲಸ ಮತ್ತು ಸಾಧನೆಯ ಸಂಕ್ಷಿಪ್ತ ಪರಿಚಯವನ್ನು ಹಿನ್ನೆಲೆಯಲ್ಲಿ ಹೇಳುತ್ತಿದ್ದರು. ಪೂರಾ ವಿಜ್ಞಾನ ಭವನ ಚಪ್ಪಾಳೆ ಹೊಡೆದು ಅವರನ್ನು ಅಭಿನಂದಿಸಿತು.

ಈ ಸಮಾರೋಹದ ನಂತರ ರಾಷ್ಟ್ರೀಯ ಮಟ್ಟದ ಪ್ರಿಂಟ್ ಮಾಧ್ಯಮ, ಎಲೆಕ್ಟ್ರಾನಿಕ್ ಮಾಧ್ಯಮ ಮತ್ತು ರೇಡಿಯೊ ವಾಹಿನಿಗಳು ಭಾವೇಶ್ ಅವರ ಸಂದರ್ಶನಕ್ಕೆ ಧಾವಿಸಿದವು. ಅವರ ಅಷ್ಟೆಲ್ಲ ವರ್ಷಗಳ ಹೋರಾಟ ಮತ್ತು ಪರಿಶ್ರಮಕ್ಕೆ ಮೆಚ್ಚುಗೆ ದೊರೆತಿತ್ತು.ಆ ಪುರಸ್ಕಾರವನ್ನು ಪಡೆದು ಮಹಾಬಲೇಶ್ವರಕ್ಕೆ ಹಿಂತಿರುಗಿದಾಗ, ಹೊಸ ಉತ್ಸಾಹದಿಂದ ತಮ್ಮ ಹಾಸ್ಟೆಲ್ ಪ್ರಾಜೆಕ್ಟ್ ಮುಂದುವರೆಸಿದರು. ಭಾವೇಶ್ ತಮಗೆ ಪುರಸ್ಕಾರದೊಡನೆ ದೊರೆತ ಒಂದು ಲಕ್ಷ ರೂಪಾಯಿಯನ್ನು ಕೂಡ ಹಾಸ್ಟೆಲ್ ಕಟ್ಟಲು ತೊಡಗಿಸಿದರು.

ಅಧ್ಯಾಯ19

## ಕಣ್ಣ ತುಂಬಾ ನೂರು ಕನಸು

ಹಾಸ್ಟೆಲ್ ಕಟ್ಟಡ ಕಡೆಗೂ ಮುಗಿಯುವ ಹಂತಕ್ಕೆ ಬಂದಿತು. ಭಾವಸಾ ಮತ್ತು ಅವರ ಸಂಪೂರ್ಣ ಪರಿವಾರದತ್ತ ಭಾವೇಶ್ ಆಜೀವ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಾರೆ. ಈ ಪ್ರಾಜೆಕ್ಟ್‌ನಲ್ಲಿ ಅವರು ಭಾವೇಶ್ ಅವರ ಸ್ವಾಭಿಮಾನಕ್ಕೆ ಪೆಟ್ಟಾಗದ ಹಾಗೆ, ಮಾರ್ಗದರ್ಶನ ನೀಡಿದ್ದರು. ಅವರೊಡನೆ ಸದಾ ಜೊತೆಯಾಗಿ ನಿಂತಿದ್ದರು. ರಾಜು ಭಾಯಿ ಮೋರೆ, ತಿಲಕ್ ಸ್ಮಾರಕ್ ಪ್ರದರ್ಶನದ ಸಮಯದಲ್ಲಿ ಭಾವೇಶ್ ಅವರಿಗೆ ಒಳ್ಳೆಯ ಮಿತ್ರರಾಗಿದ್ದರು. ಈ ಹಾಸ್ಟಲ್ ನಿರ್ಮಾಣದಲ್ಲಿ ತಮ್ಮ ಯೋಗದಾನವನ್ನು ನೀಡಿದರು.

ಎಲ್ಲೆಲ್ಲಿ ಅವರಿಗೆ ಕಡಿಮೆ ಬೆಲೆಯಲ್ಲಿ ಸಿಸಿಟಿವಿ ಕ್ಯಾಮೆರಾ, ಇನ್ವರ್ಟರ್ ಸಿಗಬಹುದಿತ್ತೋ, ಅವನ್ನು ಕೊಂಡು ತಂದು ಯಾವುದೇ ಲೇಬರ್ ಚಾರ್ಜ್ ಹಾಕದೆ ಹಾಸ್ಟೆಲ್‌ಗೆ ಈ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟರು. ಎರಡು ದೊಡ್ಡ ಹಾಲ್‌ಗಳು ನಿರ್ಮಾಣವಾಗಿದ್ದವು. ಹೆಚ್ಚು ದೃಷ್ಟಿಬಾಧಿತರು ಈ ಹಾಸ್ಟೆಲಿನ ವ್ಯವಸ್ಥೆಯ ಲಾಭ ಪಡೆಯಲಿ